‘ಇದೇ ಅಲ್ಲವಾ ಜೀವನ’ ಅಂದಿದ್ದರು.

‘ನೀನು ಕಥೆ ಬರಿ. ಉಳಿದದ್ದು ಬೆಟ್ಟ ಎಳೆಯುವವನ ಕಥೆಯ ಹಾಗೆ. ಅವಳು ನನ್ನನ್ನು ಹಿಸುಕುವ ಮೊದಲು ನೀನೇ ಅವಳನ್ನು ಹಿಸುಕಿಬಿಡು ಅಷ್ಟು ಸಾಕು.’

★★★

‘ಆದರೆ, ನನ್ನ ಮನಸೆಲ್ಲ ಚಾರುದತ್ತರ ಅಟ್ಟದ ಸಂದೂಕದೊಳಗಿರುವ ‘ರಕ್ತಚಂದನ’ದ ಕಡೆಗೇ ಇರುತ್ತಿತ್ತು.’

ವಿಲಾಸಿನಿಯೂ ಸಂಭ್ರಮದಿಂದ ನನ್ನ ಜೊತೆ ವಿವರಿಸುತ್ತಿದ್ದಳು. ಆಕೆಗೆ ಚಾರುದತ್ತರ ತುಂಟಾಟಗಳನ್ನೂ ತನ್ನ ಜಾಣತನವನ್ನೂ ನನ್ನ ಜೊತೆ ಹಂಚಿಕೊಳ್ಳುವ ಸುಖ.

‘ನಿನ್ನ ಜೊತೆ ಎಲ್ಲವನ್ನೂ ಹಂಚಿಕೊಳ್ಳುತ್ತಿರುವುದರಿಂದ ನಿನ್ನನ್ನು ನಾನು ಎಷ್ಟು ಹಚ್ಚಿಕೊಂಡಿದ್ದೇನೆ ಮತ್ತು ನಿನಗೆ ಎಷ್ಟು ಪ್ರಾಮಾಣಿಕಳಾಗಿದ್ದೇನೆ ಎಂಬುದನ್ನು ನೀನು ಅರ್ಥ ಮಾಡಿಕೊಂಡು ಖುಷಿಪಡಬೇಕು’ ಎಂದು ಪದೇಪದೇ ಆಕೆ ಹೇಳುತ್ತಿದ್ದಳು. ಹಾಗಾಗಿಯೇ ನಾನು ಅವಳನ್ನು ನಂಬುತ್ತಿರಲಿಲ್ಲ.

‘ಹಚ್ಚಿಕೊಳ್ಳುವುದು ಮತ್ತು ಪ್ರಾಮಾಣಿಕವಾಗಿರುವುದಕ್ಕಿಂತ ಹೆಚ್ಚು ಸುಖ ಈ ಎಲ್ಲದರಲ್ಲಿರುವ

